# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

## ಬ್ಯಾಟರಾಯನಪುರ ಉಪ ವಿಭಾಗ, ವಾರ್ಡ್ ನಂ. 06(ಥಣಿಸಂದ್ರ)

## ವಾರ್ಡ್‌ಸಮಿತಿ ಸಭೆ, ದಿನಾಂಕ: 04-06-2022ರ

## ಸಭಾ ನಡುವಳಿ

**ದಿನಾಂಕ: 04-06-2022ರಂದು ಬೆಳ್ಳಿಗೆ 11.00 ಗಂಟೆಗೆ ವಾರ್ಡ್ ನಂ.06 ಥಣಿಸಂದ್ರ ವಾರ್ಡ್ ಸಮಿತಿಯನೋಡಲ್ ಅಧಿಕಾರಿಗಳಾದ ಶ್ರೀ ಬಿ. ಎಸ್. ಶ್ರೀಧರ್ ಸ.ಕಾ.ಅ ಬ್ಯಾಟರಾಯನಪುರ ಉಪ ವಿಭಾಗ ಬಿ.ಬಿ.ಎಂ.ಪಿ ರವರ ಅಧ್ಯಕ್ಷತೆಯಲ್ಲಿ ಹೆಗಡೆನಗರ 2ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ಬಿ.ಬಿ.ಎಂ.ಪಿ ಸಮುದಾಯ ಭವನದಲ್ಲಿ ನಡೆದ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು**

| ಕ್ರಸಂ | ಸಭೆಗೆ ಹಾಜರಾಗಿರುವ ಅಧಿಕಾರಿಗಳು | ಹುದ್ದೆ |
|---|---|---|
| 1 | ಶ್ರೀ ಬಿ. ಎಸ್. ಶ್ರೀಧರ್ | ನೋಡಲ್ ಅಧಿಕಾರಿಗಳು ವಾರ್ಡ್ ನಂ 06(ಥಣಿಸಂದ್ರ) ಹಾಗೂ ಸ.ಕಾ.ಅ (ಬ್ಯಾ.ಉ.ವಿ), ಬಿ.ಬಿ.ಎಂ.ಪಿ |
| 2 | ಶ್ರೀ ಸುರೇಶ ದೇವತರಾಜ್ | ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿ, ವಾರ್ಡ್ ಸಮತಿ, ವಾರ್ಡ್ ನಂ 06(ಥಣಿಸಂದ್ರ) |
| 3 | ಶ್ರೀಮತಿ ಮಂಜುಳ ಎಸ್ | ಪೋಲೀಸ್ ಸಬ್ ಇನ್ಸಪೇಕ್ಟರ್ ಸಂಪಿಗೆಹಳ್ಳಿ ಪೋಲೀಸ್ ಠಾಣೆ |
| 4 | ಶ್ರೀ ಮುತ್ತು ರಾಜು | ಡೆಪ್ಯೂಟಿ ಆರ್.ಎಫ್.ಓ ಅರಣ್ಯ ಯಲಹಂಕ ವಲಯ |
| 5 | ಶ್ರೀ ಸಂತೋಷ ಕುಮಾರ | ಸ.ಅ ರಸ್ತೆ ಮುಲಭೂತ ಸೌರ್ಕಯ, ಯಲಹಂಕ ವಿಭಾಗ |
| 6 | ಕು. ನಂದನ ಸಿ.ಎನ್ | ಸ..ಅ, ಬಿ.ಡಬ್ಲೂ.ಎಸ್.ಎಸ್.ಬಿ (ನಿರ್ವಹಣೆ) |
| 7 | ಶ್ರೀ ಲಿಂಗರಾಜ | ಎ.ಎಸ್.ಐ ಅಮೃತಹಳ್ಳಿ ಪೋಲೀಸ್ ಠಾಣೆ |
| 8 | ಶ್ರೀ ನಂಜುಂಡಪ್ಪ | ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ. 06 (ಥಣಿಸಂದ್ರ) |
| 9 | ಶ್ರೀ ಮಹೇಶ್ ಕುಮಾರ್ | ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ. 06 (ಥಣಿಸಂದ್ರ) |
| 10 | ಶ್ರೀ ರಾಕೇಶ ವಿ | ಮಾರಶಲ್ ವಾರ್ಡ್ ನಂ 06 |

ಶ್ರೀ ಸುರೇಶ ದೇವತರಾಜ್ ವಾರ್ಡ್ ಸಮಿತಿ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ಸಮಿತಿಯ ಸಭೆಗೆ ಹಾಜರಾಗಿದ್ದ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಹಾಗೂ ವಿವಿಧ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಸಾರ್ವಜನಿಕರಿಗೆ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸುತ್ತಾ ವಾರ್ಡ್ ಸಮಿತಿಯ ಸಭೆಯಲ್ಲಿ ಚರ್ಚಿಸಬೇಕಾದ ಅಜೆಂಡಾ ವಿಷಯದ ಬಗ್ಗೆ ತಿಳಿಸಿದರು.

1. **ಹಿಂದಿನ ಸಭೆಯಲ್ಲಿ ಚರ್ಚಿಸಿಲಾಗಿರುವ ವಿಷಯಗಳ ಬಗ್ಗೆ:** ಪ್ರಥಮವಾಗಿ ಹಿಂದಿನ ಸಭೆಯಲ್ಲಿ ಚರ್ಚಿಸಲಾಗಿರುವ ವಿಷಯಗಳ ಬಗ್ಗೆ ವಿವರವನ್ನು ಸದಸ್ಯ ಕಾರ್ಯದರ್ಶಿಗಳು ಸಭೆಯ ಗಮನಕ್ಕೆ ತರುತ್ತಾ, ಹಿಂದಿನ ಸಭೆಯಲ್ಲಿ ಗೈರು ಹಾಜರಾದ ಅಧಿಕಾರಿಗಳಿಗೆ ನೋಟಿಸ್ಸುಗಳನ್ನು ನೀಡಲಾಗಿರುತ್ತದೆ ಎಂದು ತಿಳಿಸಿದರು.

2. **ಕೋವಿಡ್ -19 ಸೋಂಕು ಹರಡವುದನ್ನು ತಡೆಗಟ್ಟುವ ಬಗ್ಗೆ :**ಆರೋಗ್ಯ ವ್ಯಧ್ಯಾಧಿಕಾರಿಗಳು, ಹೆಗಡೆನಗರ ಪ್ರಾಥಮಿಕ ಆರೋಗ್ಯ ಕೇಂದ್ರರವರು ಸಭೆಗೆ ಗೈರು ಹಾಜರಾಗಿದ್ದು ತುರ್ತು ಕೆಸಲದ ನಿಮಿತ್ತ ಬಿ.ಬಿ.ಎಂ.ಪಿ ಕೇಂದ್ರ ಕಛೇರಿಗೆ ಹೋಗಿರುವುದಾಗಿ ತಿಳಿಸಿದರು. ಆದ್ದರಿಂದ ಕೋವಿಡ್ -19 ಸೋಂಕು ಹರಡವುದನ್ನು ತಡೆಗಟ್ಟುವ ವಿಷಯದ ಬಗ್ಗೆ ಚರ್ಚಿಸಲು ಸಾಧ್ಯವಾಗಿರುವುದಿಲ್ಲ.

3. **ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಬಗ್ಗೆ :**

   - **ಶ್ರೀ ದಾಸಪ್ಪ ಹೆಗಡೆನಗರರವರು ಮಾತನಾಡಿ** ಹೆಗಡೆನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಹತ್ತಿರ ಇರುವ ಬ್ಲಾಕ್ ಸ್ಪಾಟ್ ಹಾಗೂ ಇನ್ನಿತರೆ ಪ್ರದೇಶಗಳಲ್ಲಿ ಘನತ್ಯಾಜ್ಯ ವಿಲೇವಾರಿ ಸಮರ್ಪಕವಾಗಿ ಗುತ್ತಿಗೆದಾರರು

ಮಾಡುತ್ತಿರುವುದಿಲ್ಲವೆಂದು ಹಾಗೂ ಮನೆ ಮನೆಗಳಿಗೆ ತ್ಯಾಜ್ಯ ಸಂಗ್ರಹಿಸುವ ಆಟೋ ಟಿಪ್ಪರಗಳು ಬರುತ್ತಿರುವುದಿಲ್ಲವೆಂದು ತಿಳಿಸಿದರು. ಈ ಸಂಬಂದ ಶ್ರೀ ಮಹೇಶ ಕಿರಿಯ ಆರೋಗ್ಯ ಪರಿವೀಕ್ಷಕರು, ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಮನೆಗಳ ಸಂಖ್ಯೆ ಹೆಚ್ಚಾಗಿದ್ದು, ಹೆಚ್ಚಿನ ಆಟೋ ಟಿಪ್ಪರಗಳು ಅವಶ್ಯಕವಾಗಿದ್ದು, ಮಿಶ್ರ ತ್ಯಾಜ್ಯ ಹೆಚ್ಚಿಗೆ ಬರುತ್ತಿರುವ ಕಾರಣ ಎಲ್ಲಾ ಬ್ಲಾಕಸ್ಪಾಟ್‌ಗಳಲ್ಲಿ ತ್ಯಾಜ್ಯ ವಿಲೇವಾರಿಗಾಗಿ ಹೆಚ್ಚುವರಿ ಕಾಂಪ್ಯಾಕ್ಟರ್‌ಗಳ ಅವಶ್ಯಕವಾಗಿದ್ದು, ಹೆಚ್ಚಿನ ಆಟೋ ಟಿಪ್ಪರಗಳಿಗೆ ಮತ್ತು ಕಾಂಪ್ಯಾಕ್ಟರ್‌ಗಳಿಗೆ ಮೇಲಾಧಿಕಾರಿಗಳಿಗೆ ಪ್ರಸ್ತಾವನೆ ಕಳುಹಿಸಲಾಗಿದೆ ಎಂದು ತಿಳಿಸಿದರು.

- **ಪ್ರಶಾಂತಿ ನಗರದ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು** ಮಾತನಾಡಿ ಪ್ರಶಾಂತಿ ನಗರದಲ್ಲಿಯೂ ಸಹ ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಸಮರ್ಪಕವಾಗಿ ಆಗುತ್ತಿರುವುದಿಲ್ಲವೆಂದು ಸಭೆಯಲ್ಲಿ ತಿಳಿಸದರು.

**4. ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರು ಮತ್ತು ಒಳಚರಂಡಿಗೆ ಸಂಬಂದಿಸಿದ ವಿಷಯಗಳ ಬಗ್ಗೆ :**

- **ವಾರ್ಡ್ ಸಹಾಯಕ ಅಭಿಯಂತರರು ಮಾತನಾಡಿ** ಬಿ.ಡಬ್ಲ್ಯೂ.ಎಸ್.ಎಸ್.ಬಿ. ವತಿಯಿಂದ ಕಾವೇರಿ ಕುಡಿಯುವ ನೀರನ ಟೆಸ್ಟಿಂಗ್ ಬಾಕಿವಿರುವ ಕಾರಣ ಭರತನಗರ ಅಂಜನಾದ್ರಿ ಬಡಾವಣೆ, ಪಿ ಅಂಡ್ ಟಿ ಬಡಾವಣೆ ಭಾಗ್ಯಶ್ರೀ ಬಡಾವಣೆ, ಥಣಿಸಂದ್ರ ಗ್ರಾಮ, ಅಶ್ವಥನಗರದ ರಸ್ತೆಗಳಿಗೆ ಡಾಂಬರೀಕರಣ ಕಾಮಗಾರಿ ಕೈಗೊಳ್ಳಲು ಸಾಧ್ಯವಾಗುತ್ತಿರುವುದಿಲ್ಲ ಎಂದು ತಿಳಿಸಿದರು ಹಾಗೂ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಅಧಿಕಾರಿಗಳು ವಿಶೇಷ ಗಮನ ಹರಿಸಿ ಕೂಡಲೇ ಕುಡಿಯುವ ನೀರಿನ ಟೆಸ್ಟಿಂಗ್ ಕಾರ್ಯವನ್ನು ಪೂರ್ಣಗೊಳಿಸಿ ಮಾಹಿತಿಯನ್ನು ಬಿ.ಬಿ.ಎಂ.ಪಿ ಉಪ ವಿಭಾಗ ಕಚೇರಿಗೆ ನೀಡಬೇಕಾಗಿ ಕೊರಿದರು.
- **ಶ್ರೀ ದಾಸಪ್ಪ ಹೆಗಡೆನಗರರವರು ಮಾತನಾಡಿ** ಹೆಗಡೆನಗರದ 1ನೇ ಅಡ್ಡರಸ್ತೆಯಲ್ಲಿ ಕಳೆದ ಸುಮಾರು ದಿನಗಳಿಂದ ಮ್ಯಾನಹೊಲ್ ಓವರ ಫ್ಲೋ ಆಗಿ ರಸ್ತೆ ಮೇಲೆ ನೀರು ಹರಿಯುತ್ತಿರುವದರಿಂದ ಸಾರ್ವಜನಿಕರಿಗೆ ತೊಂರೆಯಾಗುತ್ತಿದ್ದು, ಈ ಸಂಬಂದ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಅಧಿಕಾರಿಗಳು ಗಮನ ಹರಿಸಿ ಸರಿಪಡಿಸಲು ಕ್ರಮ ವಹಿಸುತ್ತಿರುವುದಿಲ್ಲವೆಂದು ಸಭೆಯಲ್ಲಿ ತಿಳಿಸಿದರು. ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಸ.ಅ ಮಾತನಾಡಿ ಪರಿಶೀಲಿಸಿ ಕೂಡಲೇ ಸಮಸ್ಯೆಯನ್ನು ಬಗೆಹರಿಸುವುದಾಗಿ ತಿಳಿಸಿದರು.
- **ಶ್ರೀನಿವಾಸರಾವ ಅಮರಜ್ಯೋತಿ ನಗರರವರು ಮಾತನಾಡಿ** ವಾರ್ಡ್ ನಂ 06 ರಲ್ಲಿ ಒಳಚರಂಡಿ ಕಾಮಗಾರಿಯು ಅಪೂರ್ಣವಾಗಿದ್ದು. ಎಸ್.ಟಿ.ಪಿ. ನಿರ್ಮಾಣ ಕಾಮಗಾರಿ ಯಾವಾಗ ಪೂರ್ಣಗೊಳ್ಳುತ್ತದೆ ಎಂದು ವಿಚಾರಿಸಿದಾಗ ಸ್ಪಷ್ಟ ಮಾಹಿತಿ ಸಿಗುತ್ತಿರುವುದಿಲ್ಲ. ಆದ್ದರಿಂದ ಒಂದು ನಿಯೊಗದೊಂದಿಗೆ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಮೇಲಾಧಿಕಾರಿಗಳನ್ನು ಭೇಟಿ ಮಾಡಿ ವಾರ್ಡ್ ನಂ 06 (ಥಣಿಸಂದ್ರ) ವ್ಯಾಪ್ತಿಯಲ್ಲಿ ಕೈಗೊಳ್ಳಲಾಗಿರುವ ಒಳಚರಂಡಿ ಕಾಮಗಾರಿಯಲ್ಲಿನ ಸಮಸ್ಯಗಳ ಬಗ್ಗೆ ಚರ್ಚಿಸುವದು ಸೂಕ್ತ ಎಂದು ತಿಳಿಸಿದರು.

**5. ವಾರ್ಡ್ ವ್ಯಾಪ್ತಿಯಲ್ಲಿನ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ :**

- ಬಿ.ಬಿ.ಎಂ.ಪಿ ಆಯವ್ಯಯದ 2022– 23 ನೇ ಸಾಲಿನ ಲೆಕ್ಕ ಶೀರ್ಷಿಕೆ ಪಿ–3726 ರಲ್ಲಿ ಹೊಸ ವಲಯದ ಪ್ರತಿ ವಾರ್ಡ್‌ಗೆ ರೂ 6.00 ಕೋಟಿಗಳಂತೆ ಅನುಮೋದನೆಯಾಗಿದ್ದು, ಈ ಅನುದಾನದಲ್ಲಿ ರೂ 30.00 ಲಕ್ಷಗಳು ಗುಂಡಿ ಮುಚ್ಚುವ ಕಾರ್ಯಕ್ಕೆ ಮೀಸಲಿರಿಸಿಸ ಬೇಕಾಗಿದ್ದು, ಉಳಿದ ಅನುದಾನರೂ 5.70 ಕೋಟಿಗಳಿಗೆ ಕಾಮಗಾರಿಗಳನ್ನು ಕೈಗೊಳ್ಳಲು ಕ್ರೀಯಾಯೋಜನೆ ತಯಾರಿಸಿ ಸಲ್ಲಿಸಲು ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಕಛೇರಿ **ಆದೇಶ ಸಂಖ್ಯೆ : ಮುಆ/ಪಿಆರ್/21/2022–23** ದಿನಾಂಕ **31–05–2022** ರಲ್ಲಿ ನೀಡಿರುವ ಸೂಚನೆಯಂತೆ ವಾರ್ಡ್ ಸಮಿತಿಯ ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಿ 2022–23 ನೇ ಸಾಲೀನ ಲೆಕ್ಕ ಶೀರ್ಷಿಕೆ ಪಿ–3726 ಅಡಿಯಲ್ಲಿ ಕೈಗೊಳ್ಳಲು ಕ್ರೀಯಾ ಯೋಜನೆ ತಯಾರಿಸಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲು ಸರ್ವಾನುಮತದಿಂದ ತಿರ್ಮಾನಿಸಲಾಯಿತು.

| SL | P-CODE | NAME OF WORK | AMOUNT IN LAKHS |
|---|---|---|---|
| 1 | P3726 | Maintenance of water supply Existing borewells at Dasrahalli and Rachenahalli Village Surrounding area in Ward No. 06 Byatarayanapura Sub Division | 30.00 |

| | | | |
|---|---|---|---|
| 2 | P3726 | Maintenance of water supply Existing borewells at Hegadenagara, Bharathangara, Saraipalya Surrounding area in Ward No. 06, Byatarayanapura Sub Division | 30.00 |
| 3 | P3726 | Drilling of Borewell and Providing Pump and Motor and Laying Pipeline at in Ward No. 06, Byatarayanapura Sub Division | 70.00 |
| 4 | P3726 | Engaging Tractor and labour for Daily Maintenance of Drains, Culverts, Shoulder Drains, etc at Dasarahalli and Rachenahalli Surrounding area in ward no. 06 Byatarayanapura Sub Division | 15.00 |
| 5 | P3726 | Engaging Tractor and labour for Daily Maintenance of Drains, Culverts, Shoulder Drains, etc at Hegadenagara and Bharathnagara Saraipalya Surrounding area in ward no. 06 Byatarayanapura Sub Division | 15.00 |
| 6 | P3726 | Improvements to Drains and Construction of Culverts at varous places in ward no. 06 Byatarayanapura Sub Division | 10.00 |
| 7 | P3726 | supply of water throught water tanker at Rachenahalli and Hegadenagaa in Ward No.06 Surrounding area Byatarayanapura sub division. | 10.00 |
| 8 | P3726 | supply of water throught water tanker at Thanisandra, Saraipalya in Ward No.06 Surrounding area Byatarayanapura sub division. | 10.00 |
| 9 | P3726 | Construction of Temprovary Immerssion Tank for Ganesha Idels in ward no. 06, Byatarayanapura Sub Division | 10.00 |
| 10 | P3726 | Construction of Drains and Culverts at Muniyamma layout Nagawara in ward no. 06 Byatarayanapura Sub Division | 40.00 |
| 11 | P3726 | Improvements to drains and Construction of Culverts at MS Ramaiah North City in Ward No.06 Byatarayanapura Sub Division | 10.00 |
| 12 | P3726 | Improvements to Drains and Construction of Culverts at Saraipalya Govt School Surrounding in ward no. 06 Byatarayanapura Sub Division | 52.00 |
| 13 | P3726 | Improvements to Drains and Construction of Culverts at Thanisandra Surrounding in ward no. 06 Byatarayanapura Sub Division | 53.00 |
| 14 | P3726 | Improvements to Drains and Construction of Culverts at Govt School Thanisandra Surrounding in ward no. 06 Byatarayanapura Sub Division | 52.00 |
| 15 | P3726 | Improvements to Drains and Construction of Culverts at Fathima Layout Surrounding in ward no. 06 Byatarayanapura Sub Division | 53.00 |
| 16 | P3726 | Improvements to Drains and Construction of Culverts at Dasarahalli and Surrounding in ward no. 06 Byatarayanapura Sub Division | 40.00 |
| 17 | P3726 | Improvements and maintenance of Foothpath and Drains in ward No. 06 Byatarayanapura Sub Division | 30.00 |
| 18 | P3726 | Desilting of Drains , Construction of Tank and Providing Pump set for De-watering in flood areas in ward No. 06Byatarayanpura Sub Division | 40.00 |
| | | **Total Amount** | **570.00** |

6. <u>ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆಗಳಲ್ಲಿನ ಗುಂಡಿಗಳನ್ನು ಮುಚ್ಚುವ ಬಗ್ಗೆ</u>

- ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರು ಎಲ್ಲಾ ರಸ್ತೆಗಳಲ್ಲಿನ ಗುಂಡಿಗಳನ್ನು ಮುಚ್ಚಲು ಸೂಚನೆ ನೀಡಿದ್ದು ಅದರಂತೆ ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆಗಳ ಗುಂಡಿ ಮುಚ್ಚುವ ಕಾರ್ಯ ಪ್ರಗತಿಯಲ್ಲಿದ್ದು, ಈಗಾಗಲೇ ಚೌರಪ್ಪರೆಡ್ಡಿ ಬಡಾವಣೆ, ಭೂವನೇಶ್ವರಿನಗರದ 1ನೇ ಅಡ್ಡರಸ್ತೆ, ರೈಲ್ವೆ ಸಮನಾಂತರ ರಸ್ತೆ, ಎಂ.ಸಿ.ಇ.ಸಿ.ಹೆಚ್.ಎಸ್ ಬಡಾವಣೆ ಗಳಲ್ಲಿ ಗುಂಡಿಗಳನ್ನು ಮುಚ್ಚಲಾಗಿದೆ ಎಂದು ಹಾಗೂ ಸಾದೀಕ ಬಡಾವಣೆ, ನಾಗವಾರ ಸರ್ಕಾರಿ ಶಾಲೆ ಥಣಿಸಂದ್ರ ಪಕ್ಕ ರಸ್ತೆ ಮತ್ತು ಇನ್ನಿತರೆ ಪ್ರದೇಶಗಳಲ್ಲಿ ಗುಂಡಿ ಮುಚ್ಚುವ ಕಾರ್ಯ ಕೈಗೊಳ್ಳಲಾಗುವುದೆಂದು ತಿಳಿಸಿದರು.

7. <u>ವಿದ್ಯೂತ್ ದೀಪಗಳ ನಿರ್ವಹಣೆ ಬಗ್ಗೆ</u>

- **ಬಿ.ಬಿ.ಎಂ.ಪಿ ಯಲಹಂಕ ವಲಯದ ವಿದ್ಯೂತ್ ಶಾಖೆ** ವತಿಯಿಂದ ವಾರ್ಡ್ ವ್ಯಾಪ್ತಿಯಲಿ ್ಲಕೆಲವು ಬಡಾವಣೆಗಳಲ್ಲಿ ಈಗಾಗಲೇ ಹೊಸದಾಗಿ ಎಲ್.ಇ.ಡಿ ಬಲ್ಬ ಗಳು ಅಳವಡಿಸಲಾಗಿದ್ದು, ಬಾಕಿವಿರುವ ಪ್ರಧೇಶಗಳಲ್ಲಿ ಸಹ ಕೂಡಲೇ ಹೊಸದಾಗಿ ಎಲ್.ಇ.ಡಿ ಬಲ್ಬಗಳನ್ನು ಅಳವಡಿಸಲಾಗುವುದೆಂದು ತಿಳಿಸಿದರು. ಬೇಸ್ಕಾಂ ಅಧಿಕಾರಿಗಳಿಗೆ ನೋಟಿಸ್ಸು ನೀಡಿದ್ದರು ಸಹ ಇಂದಿನ ಸಭೆಗೆ ಗೈರು ಹಾಜರಾಗಿರುತ್ತಾರೆ..

8. <u>ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು.</u>

- **ಶ್ರೀ ದಾಸಪ್ಪ ಹೆಗಡೆನಗರ ರವರು ಮಾತನಾಡಿ** ನಾರಾಯಣಪುರ ಕ್ರಾಸ ಹತ್ತಿರ ಹೊಸದಾಗಿ ನಿರ್ಮಿಸಿರುವ ಮೇಲಸೇತುವ ಕೆಳಗೆ ಸಾರ್ವಜನಿಕರಿಗಾಗಿ ಶೌಚಾಲಯವನ್ನು ನಿರ್ಮಿಸಲು ಉದ್ದೇಶೀಸಿರುವ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಿದರು. ಈ ಸಂಬಂಧ ವಾರ್ಡ್ ಅಭಿಯಂತರರು ಮಾತನಡಿ ಚಿಕ್ಕಜಾಲ ಟ್ರಾಫೀಕ್ ಪೋಲಿಸ್ ಸ್ಟೇಷನ್ ಮತ್ತು ರಸ್ತೆ ಮೂಲಭೂತ ಸೌಕರ್ಯ ವಿಭಾಗಕ್ಕೆ ಪತ್ರವನ್ನು ಬರೆದು ಶೌಚಾಲಯವನ್ನು ನಿರ್ಮಿಸಲು ಅನುಮತಿ ಕೊರಲಾಗಿದ್ದು, ಸದರಿಯವರು ಇಲ್ಲಿಯವರೆಗೆ ಅನುಮತಿ ನೀಡಿರುವುದಿಲ್ಲವೆಂದು ಸಭೆಗೆ ತಿಳಿಸಿದರು. ಆದ್ದರಿಂದ ಸದರಿ ವಿಷಯದ ಬಗ್ಗೆ ಹಾಜರಿದ್ದ ರಸ್ತೆ ಮೂಲಭೂತ ಸೌಕರ್ಯ ವಿಭಾಗದ ಸ.ಅ ರವರು ಪರಿಶೀಲಿಸಿ ಕ್ರಮ ವಹಿಸಲು ನೋಡಲ್ ಅಧಿಕಾರಿಗಳು ಸೂಚಿಸಿದರು.
- **ಶ್ರೀನಿವಾಸರಾವ ಅಮರಜ್ಯೋತಿ ನಗರ ರವರು** ಮಾತನಾಡಿ ಥಣೀಸಂದ್ರ ಮುಖ್ಯ ರಸ್ತೆಯಲ್ಲಿ ಅಶ್ವಥನಗರ ಆಂಜನೇಯ ದೇವಸ್ಥಾನದ ಹತ್ತಿರ ಈ ಹಿಂದೆ ಇದ್ದದೊಡ್ಡದಾದ ಮರಒಣಗಿದ್ದರಿಂದ ರಂಬೆಗಳನ್ನು ಕತ್ತರಿಸಲಾಗಿದ್ದು, ಬಸ್ಸುಗಾಗಿ ಕಾಯುವ ಸಾರ್ವಜನಿಕರಿಗಾಗಿ ಕೂಡಲೇ ಒಂದು ಬಸ್ಸು ಸ್ಟಾಪ್ ನಿರ್ಮಿಸುವುದು ಅತೀ ಅವಶ್ಯಕವಾಗಿರುತ್ತದೆ ಎಂದು ತಿಳಿಸಿದರು. ಈ ಬಗ್ಗೆ ಬಿ.ಬಿ.ಎಂ.ಪಿ.ಯ ಟ್ರಾಫೀಕ್ ಇಂಜಿನಿಯರಿಂಗ್ ಸೇಲ್‌ಗೆ ಪ್ರಸ್ತಾವನೆಯನ್ನು ಕಳುಹಿಸಿ ಕೂಡಲೇ ಒಂದು ಬಸ್ಸು ಸ್ಟಾಪ್ ನಿರ್ಮಿಸಲು ಕೋರಲು ಸಭೆಯಲ್ಲಿ ತಿರ್ಮಾನಿಸಲಾಯಿತು.
- **ಶ್ರೀ ಮೀಥುನ ಹಾಗೂ ಸಾರ್ವಜನಿಕರು** ಮಾತನಾಡಿ ಹೆಗಡೆನಗರ, ಶಬರೀನಗರ, ರಾಚೇನಹಳ್ಳಿ ಬ್ಯಾಕ್‌ಗೇಟ್ ಹತ್ತಿರ ಮತ್ತು ಎಂ.ಸಿ.ಇ.ಸಿ.ಎಚ್.ಎಸ್ ಬಡಾವಣೆಯಲ್ಲಿ ರಾತ್ರೀ ವೇಳೆಯಲ್ಲಿ ಹುಡುಗರು ಗುಂಪು ಗುಂಪಾಗಿ ಸೇರುತ್ತಿದ್ದು ಹೋಯ್ಸಳ ಪೋಲೀಸ್ ರೌಂಡಸ್‌ಗಳನ್ನು ರಾತ್ರೀ ವೇಳೆಯಲ್ಲಿ ಈ ಜಾಗಗಳಲ್ಲಿ ಹೆಚ್ಚಿಸಬೇಕಾಗಿ ಕೋರಿದರು. ಈ ಸಂಬಂದ ಹಾಜರಿದ್ದ ಸಂಪಿಗೇಹಳ್ಳಿ ಪೋಲೀಸ್ ಸಬ್ ಇನ್ಸಪೇಕ್ಟರ್ ರವರು ಮಾತನಾಡಿ ರಾತ್ರೀ ವೇಳೆಯಲ್ಲಿ ಹೋಯ್ಸಳ ಪೋಲೀಸ್ ರೌಂಡಸ್‌ಗಳನ್ನು ಹೆಚ್ಚಿಸಲು ಕ್ರಮ ಕೃಗೊಳ್ಳಲಾಗುವುದೆಂದು ಸಭೆಗೆ ತಿಳಿಸದರು.

ಕೊನೆಯದಾಗಿ ಮಾನ್ಯ ನೋಡಲ್ ಅಧಿಕಾರಿಗಳು, ವಾರ್ಡ್ ಸಮಿತಿರವರು ಮಾತನಾಡಿಈವರೆಗೂ ಸಭೆಯಲ್ಲಿ ಚರ್ಚಿಸಿರುವ ಎಲ್ಲಾ ವಿಷಯಗಳನ್ನು ಗಂಬೀರವಾಗಿ ಪರೀಗಣಿಸಿ ಎಲ್ಲಾದೂರು ಮತ್ತು ಸಲಹೆ ಮತ್ತು ಸೂಚನೆಗಳನ್ನು ಕಾರ್ಯರೂಪಕ್ಕೆತರಲುಸಂಬಂಧಪಟ್ಟ ಇಲಾಖೆ ಅಧಿಕಾರಿಗಳುಅಗತ್ಯಕ್ರಮ ಕೈಗೊಳ್ಳುವಂತೆ ಸೂಚಿಸುತ್ತಾಗೂಗಲ್ ಮೀಟ್ಆಪ್

ಮುಖಾಂತರ ವರ್ಚುವಲ್ ಸಭೆಗೆ ಹಾಜರಾಗಿದ್ದಎಲ್ಲಾ ಅಧಿಕಾರಿಗಳಿಗೆ ಹಾಗೂ ವಿವಿಧ ಬಡಾವಣೆ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಹಾಜರಾಗಿರುವ ಸಾರ್ವಜನಿಕರಿಗೆ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

04.06.2022
ಕಾರ್ಯದರ್ಶಿ
ಹಾಗೂ ಸಹಾಯಕಅಭಿಯಂತರರು
ವಾರ್ಡ್ ನಂ. 06, (ಥಣಿಸಂದ್ರ)

4/6/2022
ನೋಡಲ್ ಅಧಿಕಾರಿಗಳು
ವಾರ್ಡ್ ಸಮಿತಿ, ವಾರ್ಡ್ ನಂ. 06(ಥಣಿಸಂದ್ರ)
ಹಾಗೂ ಸ.ಕಾ.ಅ ಬ್ಯಾಟರಾಯನಪುರ ಉಪ ವಿಭಾಗ
ಬಿಬಿಎಂಪಿ, ಬೆಂಗಳೂರು

ಪ್ರತಿಯನ್ನು.

1. ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂದ್ರಕಛೇರಿ, ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಜಂಟಿ ಆಯುಕ್ತರು, ಯಲಹಂಕ ವಲಯ ರವರಿಗೆ ಅವಗಾಹನೆಗೆ ಸಲ್ಲಿಸಿದೆ.
3. ಮುಖ್ಯ ಅಭಿಯಂತರರು, ಯಲಹಂಕ ವಲಯರವರಿಗೆ ಅವಗಾಹನೆಗೆ ಸಲ್ಲಿಸಿದೆ.
4. ಕಂದಾಯ ಅಧಿಕಾರಿಗಳು (ಯಲಹಂಕ) ಬೆಂಗಳೂರು ರವರ ಅವಗಾಹನೆಗೆ ಸಲ್ಲಿಸಿದೆ.
5. ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ವಿಭಾಗರವರಿಗೆ ಸಲ್ಲಸಿದೆ
6. ಕಛೇರಿಕಡತಕ್ಕೆ.